# ಸಿದ್ಧಮಾದರಿಯ ಒಡ್ಡಿಗೆ ಹೊಸ ನೀರು

'ಸುಧಾ ಯುಗಾದಿ ವಿಶೇಷಾಂಕ' ಹಲವು ಕಾರಣಗಳಿಗೆ ಇಷ್ಟವಾಯಿತು. ಮುಖ್ಯವಾಹಿನಿ ಪತ್ರಿಕೆಗಳ ವಿಶೇಷಾಂಕಗಳ ಸಿದ್ಧಮಾದರಿಯನ್ನು 'ಸುಧಾ' ಮುರಿದು ಕಟ್ಟಿದಂತೆ ತೋರುತ್ತಿದೆ. ಪುಟ ಪುಟದಲ್ಲೂ ಅದರ ನಾವೀನ್ಯತೆ, ಶ್ರಮ ಎದ್ದು ಕಾಣುತ್ತಿದೆ. ಮುಖ್ಯವಾಗಿ ಹೊಸ ತಲೆಮಾರನ್ನು ಗಮನದಲ್ಲಿಟ್ಟುಕೊಂಡೇ ಸಂಚಿಕೆ ರೂಪುಗೊಂಡಿದ್ದು, ಹೊಸಬರ ಬರಹದ ಬನಿ, ಅವರ ಸಂವೇದನೆ, ಆಶಯ, ಕತೆ, ಪ್ರಬಂಧ, ಕಾವ್ಯದ ಹೊಸ ದಿಕ್ಕನ್ನು ಸೂಚಿಸುವಂತಿದ್ದು ಸಾಹಿತ್ಯದ ಹೊಳೆಗೆ ಹೊಸ ನೀರು ಹರಿದಂತಾಗಿದೆ.

ಧರ್ಮ, ದೇವರುಗಳು ಉತ್ಪನ್ನದ ಸರಕಾಗಿ ಮಾರ್ಪಟ್ಟಿವೆ. ದ್ವೇಷ ಹರಡುವ, 'ಬಹುತ್ವ' ಕದಡುವ ಅಪಾಯಕಾರಿ ಬೆಳವಣಿಗೆಗಳು ಈ ಕಾಲದ ಅನುದಿನದ ಭಾಗವೇ ಆಗಿವೆ. ತೋರುಗಾಣಿಕೆಯ ಭಕ್ತಿಯೇ ಅಧ್ಯಾತ್ಮವಾಗಿರುವ ಈ ಹೊತ್ತಿನಲ್ಲಿ 'ನನ್ನ ಅಧ್ಯಾತ್ಮ'ದ ಕುರಿತ ಬರಹಗಳು ಸಕಾಲಿಕವಾಗಿವೆ. ಅವರವರ ನಿಜ ಅಧ್ಯಾತ್ಮವನ್ನು ಇಲ್ಲಿನ ಬರಹಗಾರರು ಅಭಿವ್ಯಕ್ತಿಸಿದ್ದಾರೆ. 'ಅಧ್ಯಾತ್ಮ' ಕುರಿತ ಈವರೆಗಿನ ತೋರಿಕೆಯ ನಂಬಿಕೆಗಳನ್ನು ಧಿಕ್ಕರಿಸುವಂತಿರುವ ಈ ಬರಹಗಳು ಅಧ್ಯಾತ್ಮಕ್ಕೆ ಬೇರೆಯದೇ ವ್ಯಾಖ್ಯಾನ ಬರೆಯುವಂತಿವೆ. ಈ ಕಾರಣಕ್ಕೆ 'ನನ್ನ ಅಧ್ಯಾತ್ಮ' ಮಹತ್ವದ ಚರ್ಚೆ. ಒಟ್ಟಾರೆಯಾಗಿ ಸಂಚಿಕೆ ಯುಗಾದಿಯ 'ಸಿಹಿ'ಯನ್ನು ಉಣಬಡಿಸುವಂತಿದೆ.

—ಟಿ.ಎಸ್. ಗೊರವರ,
ಸಂಪಾದಕ, 'ಸಂಗಾತ' ಸಾಹಿತ್ಯಪತ್ರಿಕೆ




# ಹದ ಪಾಕದ ಹಬ್ಬದೂಟ!

ಪತ್ರಿಕೆಗಳ ವಿಶೇಷಾಂಕವನ್ನು ನಿಜ ಅರ್ಥದಲ್ಲಿ 'ವಿಶೇಷ'ವಾಗಿಸುವುದು ಅಂದುಕೊಂಡಷ್ಟು ಸುಲಭವಲ್ಲ. ತನ್ನದೇ ಆದ ಸಿದ್ಧಸೂತ್ರಗಳ ಚೌಕಟ್ಟಿನೊಳಗೆ, ತನ್ನ ಓದುಗ ಬಳಗವನ್ನೂ ಗಮನದಲ್ಲಿರಿಸಿಕೊಂಡು, ಪ್ರತಿ ವರ್ಷವೂ ಹೊಸತನ್ನೇ ಕೊಡಹೊರಡುವುದು ಸವಾಲಿನ ಕೆಲಸವೇ. ಈ ಸವಾಲನ್ನು ಎದುರಿಸುವುದೆಂದರೆ ಸಿದ್ಧಸೂತ್ರವನ್ನು ಮುರಿಯುವುದೇ ಆಗಿದೆ. ವಿಶೇಷಾಂಕವೆಂದರೆ ಸಾಮಾನ್ಯವಾಗಿ ಪ್ರಸಿದ್ಧರಿಂದ ಕಥೆ, ಲೇಖನಗಳನ್ನು ಬರೆಯಿಸುವುದು ರೂಢಿ. ಅದಕ್ಕೆ ವ್ಯತಿರಿಕ್ತವಾಗಿ, 'ಇದು ಯುವ ಹೃದಯಗಳ ನಾಡಿ ಮಿಡಿತ' ಎನ್ನುತ್ತ ಹೊರಬಂದಿರುವ ಈ ಬಾರಿಯ 'ಸುಧಾ ಯುಗಾದಿ ಸಂಚಿಕೆ' ವಿಭಿನ್ನವೆನಿಸುತ್ತದೆ.

ವಿವಿಧ ಪ್ರಕಾರದ ಪ್ರಬಂಧಗಳು ನನ್ನನ್ನು ಇಲ್ಲಿ ಮುಖ್ಯವಾಗಿ ಆಕರ್ಷಿಸಿತು. ಈ ಸಂಚಿಕೆಗಾಗಿಯೇ ಪತ್ರಿಕೆ, ಸ್ಪರ್ಧೆ ಏರ್ಪಡಿಸಿತ್ತು. ಶುದ್ಧ 'ಎಸ್ಸೆ'ಯಾಗಿದ್ದುಕೊಂಡೇ ಲಲಿತ ಪ್ರಬಂಧದ ಗುಣಲಕ್ಷಣಗಳನ್ನೂ ಒಳಗೊಂಡ ಆ ಬಹುಮಾನಿತ ಪ್ರಬಂಧಗಳು ಓದಿನ ಮುದಕ್ಕೆ ಇಂಬುಗೊಡುತ್ತವೆ.

'ಮೂಲದ ಹುಡುಕಾಟವೆನ್ನುವುದು ಇಂದು ಹೇಗೆ ತನ್ನ ಮೂಲ ಉದ್ದೇಶವನ್ನೇ ಕಳೆದುಕೊಳ್ಳುತ್ತಿದೆ' ಎಂಬುದನ್ನು ಸಾರುವ 'ಪ್ಯಾಪಿಲಾನ್'ರ ಬರಹದ ಸೂಕ್ಷ್ಮ ಓದುಗನನ್ನು ತಟ್ಟದೇ ಇರಲಾರದು. ಹಾಗೇ 'ಸೋರೆ ಬುರುಡೆ ಪುರಾಣ' ಮತ್ತು 'ಮಿಲಿಯನ್ ಡಾಲರ್ ಹಲ್ಲಿ' ಎನ್ನುವ ಲೇಖನಗಳು ಕೂಡಾ ತನ್ನ ಕುತೂಹಲಕಾರಿ ವಸ್ತುವಿಷಯದಿಂದಾಗಿ ಗಮನ ಸೆಳೆಯುತ್ತವೆ.

'ನನ್ನ ಅಧ್ಯಾತ್ಮ'ದಡಿಯಲ್ಲಿ ಹಲವು ಮನಸುಗಳ ಹೊಳವನ್ನು ಆಸಕ್ತಿಯಿಂದ ಗಮನಿಸುತ್ತಲೇ, ಗಾಂಧಿ ಮತ್ತು ಅಂಬೇಡ್ಕರರನ್ನು ಈ ಹೊತ್ತಿನ ಕನ್ನಡಿಯಲ್ಲಿ ಕಾಣಿಸುವ ಪ್ರಯತ್ನವನ್ನು ಮೆಚ್ಚುತ್ತಲೇ, ಇನ್ನೊಂದೆಡೆ ಕಲಬುರ್ಗಿ ನಗರದ ಆತ್ಮಕ್ಕೇ ಕನ್ನಡಿ ಹಿಡಿದು, ಅಲ್ಲಿ ಸಿಕ್ಕ ಪಟಗಳನ್ನೆಲ್ಲಾ ಪೋಣಿಸಿ ದೃಶ್ಯಕಾವ್ಯವಾಗಿಸಿದ ಪರಿಗೆ ಅಚ್ಚರಿಯೂ ಆಗುತ್ತದೆ. ಹಲವು ಊರುಗಳ ರುಚಿಯನ್ನು ಅಲ್ಲಿಯ ಪ್ರಸಿದ್ಧ ತಿಂಡಿಯ ಮುಖಾಂತರ ಪರಿಚಯಿಸುವ 'ಹೊಸ ರೆಸಿಪಿ'; ಒಂದೇ ತೋಟದ ಬಗೆಬಗೆಯ ಹೂಗಳಂತೆ, ಸ್ಪಷ್ಟ ಥೀಮಿಟ್ಟುಕೊಂಡು ರಚಿತವಾದ ಕವನಗಳ ಕಚಗುಳಿ... ಎಲ್ಲವೂ ಅನನ್ಯ.

ಒಟ್ಟಾರೆ ಹದ ಪಾಕದ, ಹಲವು ಪದಾರ್ಥ ಕಜ್ಜಾಯಗಳ, ಯುಗಾದಿಯ ಹಬ್ಬದೂಟ ಈ ವಿಶೇಷಾಂಕ!

—ಕರ್ಕಿ ಕೃಷ್ಣಮೂರ್ತಿ, ಕಥೆಗಾರ

